# ಆಯಿ ಜನನ್ಯಾಚಾರ್ಯರ 675ನೇ ಜಯಂತ್ಯುತ್ಸವ

## ಇಂದು, ನಾಳೆ ರಾಷ್ಟ್ರಮಟ್ಟದ ವಿಚಾರಗೋಷ್ಠಿ | ಆಯಿಸ್ವಾಮಿ ಕೃತಿಗಳ ಕುರಿತು ಉಪನ್ಯಾಸ, ವಿದ್ವತ್ ಸಭೆ

■ **ವಿಕ ಸುದ್ದಿಲೋಕ** ಮೇಲುಕೋಟೆ (ಮಂಡ್ಯ)

ಭಾರತದ ಪವಿತ್ರ ಶ್ರೀವೈಷ್ಣವ ಕ್ಷೇತ್ರ ಮೇಲುಕೋಟೆ ಆಚಾರ್ಯ ರಾಮಾನುಜರ ಕರ್ಮಭೂಮಿ, ಇಂತಹ ಸುಕ್ಷೇತ್ರದಲ್ಲಿ ಜನಿಸಿದ ಮಹಾನ್ ಸಂತ ಆಯಿ ಜನನ್ಯಾಚಾರ್ಯರ 675ನೇ ಜಯಂತ್ಯುತ್ಸವ ನ.29ರಂದು ನಡೆಯಲಿದೆ.

ಶ್ರೀವೈಷ್ಣವ ಪರಂಪರೆಗೆ ಮಹತ್ವದ ಕೊಡುಗೆ ನೀಡಿದ ಕರ್ನಾಟಕದ ಶ್ರೀವೈಷ್ಣವ ಸಂತಶ್ರೇಷ್ಠರಲ್ಲೊಬ್ಬರಾದ ಸ್ವಾಮಿ ಆಯಿ ಜನನ್ಯಾಚಾರ್ಯರು ಕ್ರಿ.ಶ.1344ರ ಅಕ್ಷಯ ಸಂವತ್ಸರ ಮಾಘಶುದ್ಧ ದಶಮಿಯಂದು ಮೇಲುಕೋಟೆಯಲ್ಲಿ ಜನಿಸಿ, ಚೆಲುವನಾರಾಯಣನ ಸೇವೆ ಮಾಡಿದವರು.

ರಾಮಾನುಜರ ಶಿಷ್ಯ ಪರಂಪರೆಯಲ್ಲಿ ಸೇರಿ 74ನೇ ಸಿಂಹಾಸನಾಧಿಪತಿಗಳಲ್ಲಿ ಒಬ್ಬರಾಗಿ ನೇಮಿಸಲ್ಪಟ್ಟ ಆಸೂರಿಪೆರುಮಾಳ್ ಎಂಬ ಭಕ್ತಶ್ರೇಷ್ಠರು ರಾಮಾನುಜಾ ಚಾ ರ್ಯರು 12 ವರ್ಷಗಳ ಕಾಲ ನೆಲೆಸಿ, ಮೇಲು ಕೋಟೆಯಿಂದ ಶ್ರೀರಂಗಕ್ಕೆ ಹಿಂದಿರುಗಿದ ನಂತರ ಇಲ್ಲೇ ನೆಲೆಯೂರಿ ಯದುಗಿರಿ ಸಂಪತ್ಕುಮಾರನ ನಿತ್ಯಕೈಂಕರ್ಯದಲ್ಲಿ ತೊಡಗಿದ್ದರು. ಇದೇ ಸದ್ವಂಶದಲ್ಲಿ 13ನೇ ಶತಮಾನದಲ್ಲಿ ಆಸೂರಿ ಲಕ್ಷ್ಮಣಾಚಾರ್ಯರ ಸತ್ಪುತ್ರರಾಗಿ ಶ್ರೀ ಆಸೂರಿ ದೇವರಾಜಪೆರು ಮಾಳ್ ಎಂಬ ಆಯಿ ಜನನ್ಯಾಚಾರ್ಯರು ಅವತರಿಸಿದರು.

**ಮಣವಾಳಮಾಮುನಿ ಜೀಯರ್‌ಗೆ ಗುರುಗಳು:** ಭಗವದ್ರಾಮಾನುಜರ ನಂತರದ ಕಾಲಘಟ್ಟದಲ್ಲಿ ನೂರಾರು ಶ್ರೀವೈಷ್ಣವ ದೇಗುಲಗಳನ್ನು ಜೀರ್ಣೋದ್ಧಾರ ಮಾಡಿ ನಿತ್ಯಪೂಜೆ ನಡೆಯುವಂತೆ ಮಾಡಿದ ಪ್ರಖ್ಯಾತ ಆಚಾರ್ಯರಾದ ಶ್ರೀಮಣವಾಳ ಮಾಮುನಿ ಜೀಯರ್‌ಗೆ ಗುರುಗಳಾಗಿದ್ದ ಆಯಿ ಜನನ್ಯಾಚಾರ್ಯರು ಶ್ರೀವೈಷ್ಣವ ಸಂಪ್ರದಾಯದ ಸಾರಭೂತವಾದ ಹಲವು ಮಹತ್ವದ ವಿಶ್ಲೇಷಣೆಯೊಂದಿಗೆ ಜೀಯರ್‌ರ ಹತ್ತಾರು ಸಂದೇಹಗಳನ್ನು ಪರಿಹರಿಸುತ್ತಿದ್ದರು. ತಮಿಳುನಾಡಿನ ಆಳ್ವಾರ್ ತಿರುನಗರಿಯಲ್ಲಿ ಜೀಯರ್‌ಗೆ ಆಚಾರ್ಯ ಹೃದಯವೆಂಬ ದಿವ್ಯಪ್ರಬಂಧ ಸಾರಗಳನ್ನು ತಿಳಿಸುವ ರಹಸ್ಯಗ್ರಂಥದ ಸಕಲಾರ್ಥಗಳನ್ನೂ ವಿವರಿಸಿ ಕಾಲಕ್ಷೇಪ ನಡೆಸುತ್ತಿದ್ದರು. ಆಯಿಯವರ ಬಳಿ ಮಣವಾಳಮಾಮುನಿಗಳ ಮೊಮ್ಮಗ ಜೀಯರ್ ನಾಯನಾರ್ ಸಹ ಕಾಲಕ್ಷೇಪ ಪಡೆದದ್ದು ವಿಶೇಷವಾಗಿದೆ.

ಪರಮಕಾರುಣಿಕರಾದ ಆಯಿಸ್ವಾಮಿ ಗಳು ಆಚಾರ್ಯ ಹೃದಯ, ತಿರುಪ್ಪಾವೈ, ಶ್ರೀ ವಚನಭೂಷಣ, ತಿರುಮಾಲೈ, ಪೆರಿಯತಿರುಮೊಳಿ ವ್ಯಾಖ್ಯಾನಗಳು ಮತ್ತು ಉಪನಿಷದ್ ಸಾರವಾದ ಕುರಂಗಿಪಂಚಕ ವೆಂಬ ಅದ್ಭುತವಾದ ಸ್ತೋತ್ರ ಮತ್ತು ಮುಕ್ತ ಶ್ಲೋಕಗಳಲ್ಲದೆ, ಬಿಡಿ ಪದ್ಯಗಳನ್ನೂ ರಚಿಸಿದ್ದಾರೆ. ಮಣವಾಳ ಮಾಮುನಿಗಳು ರಚಿಸಿದ ಶ್ರೀಶಾನುದಾಸ ಗುರುಪ್ರಪತ್ತಿ ಮತ್ತು ಶ್ರೀಶಾನುದಾಸ ಮುನಿಮಂಗಳಮ್ ಆಯಿಯವರ ಜೀವನ ಮತ್ತು ಹಿರಿಮೆಯನ್ನು ಸಾರುತ್ತದೆ.



ಶ್ರೀಮಣವಾಳಮಾಮುನಿಗಳ ಅವತಾರದ ಮಹತ್ವವನ್ನು ನಾಡಿಗೆ ಪರಿಚಯಿಸಿ ಹಲವು ದೇವಾಲಯಗಳ ಜೀರ್ಣೋದ್ಧಾರಕ್ಕೆ ಕಾರಣವಾದ ಆಯಿಸ್ವಾಮಿಗಳು ಸನ್ಯಾಸ ಸ್ವೀಕರಿಸಿ ಮೇಲುಕೋಟೆಯಲ್ಲೇ ವಾಸವಿದ್ದು, ಚೆಲುವನ ಸೇವೆಯಲ್ಲಿ ನಿರತರಾಗಿ 105 ವರ್ಷ ಸಾರ್ಥಕ ಬದುಕು ನಡೆಸಿ ಪರಮಪದವಾಸಿಯಾದರು. ಈ ಮಹನೀಯರ ಜಯಂತ್ಯುತ್ಸವವನ್ನು ಆಚರಿಸುವುದೇ ಸೌಭಾಗ್ಯ.

**- ಆಸೂರಿ ಆಯಿ ನರಸಿಂಹನ್ ಶ್ರೀಶಾನುದಾಸನ್**

### ದೇವರಾಜರು ಆಯಿಸ್ವಾಮಿಯಾಗಿದ್ದು

**ಶಾನುದಾಸರೆಂದೂ ಹೆಸರು ಹೊಂದಿದ್ದ ದೇವರಾಜ ಪೆರುಮಾಳ್ ಮೇಲುಕೋಟೆ ಶ್ರೀ ಚೆಲುವನಾರಾಯಣಸ್ವಾಮಿಗೆ ಮಾಲಾ ಕಾರರಂತೆ ಹೂವನ್ನು ಕಟ್ಟಿ ಸಮರ್ಪಿಸುತ್ತಿದ್ದರು. ರಾತ್ರಿ ವೇಳೆ ಸುಖೋಷ್ಣವಾಗಿ ಪಚ್ಚಕರ್ಪೂರ ಕೇಸರಿ ಮಿಶ್ರಿತ ಹಸುವಿನ ಹಾಲನ್ನು ಭಗವಂತನಿಗೆ ಅರ್ಪಿಸುತ್ತಿದ್ದರು. ಒಂದು ದಿನ ದೇಹಾಲಸ್ಯದಿಂದ ಹಾಲುತರಲು ವಿಳಂಬ ವಾದಾಗ ಸಾಕ್ಷಾತ್ ಭಗವಂತನೇ ಇಂದೇಕೆ ಆಯಿ(ತಾಯಿ) ಹಾಲು ಬರಲಿಲ್ಲ ಎಂದು ಕೇಳಿದನಂತೆ. ಹೀಗಾಗಿ ದೇವರಾಜರಿಗೆ ಅಂದಿನಿಂದ ಆಯಿ ಜನನ್ಯಾಚಾರ್ಯ ಎಂದೇ ಹೆಸರಾಯಿತು ಎನ್ನುತ್ತಾರೆ ಭಕ್ತರು.**

### ಇಂದು, ನಾಳೆ ವಿಚಾರಗೋಷ್ಠಿ

**ಆಚಾರ್ಯರ ಗ್ರಂಥಗಳ ವ್ಯಾಖ್ಯಾನಗಳ ಕುರಿತಂತೆ ನ.28 ಮತ್ತು 29 ರಂದು ಎರಡು ದಿನಗಳ ರಾಷ್ಟ್ರಮಟ್ಟದ ವಿಚಾರಗೋಷ್ಠಿಯಿದೆ. ತಿರುಪತಿ, ಶ್ರೀರಂಗಂ, ತಿರುವಲ್ಲಿಕ್ಕೇಣಿ, ಆಂಧ್ರ ಸೇರಿದಂತೆ ವಿವಿಧ ಪ್ರಖ್ಯಾತ ಧಾರ್ಮಿಕ ಕ್ಷೇತ್ರಗಳ ಪ್ರಸಿದ್ಧ ವಿದ್ವಾಂಸರು ಭಾಗವಹಿಸಲಿದ್ದಾರೆ. ಆಯಿಸ್ವಾಮಿಗಳು ರಚಿಸಿದ ಆಚಾರ್ಯ ಹೃದಯ, ಶ್ರೀವಚನಭೂಷಣ ವ್ಯಾಖ್ಯಾನ ಗ್ರಂಥಗಳ ಉಪನ್ಯಾಸ ಮತ್ತು ಶ್ರೀಭಾಷ್ಯ ಮತಿಮನ್ಥಥ ಮಂಥನ-ವಿದ್ವತ್ ಸಭೆ ನಡೆಯಲಿದೆ. ಇವುಗಳನ್ನು ಗ್ರಂಥರೂಪದಲ್ಲಿ ಹೊರತರಲಾಗುತ್ತದೆ. ಜಯಂತಿ ಮಹೋತ್ಸವದ ಸಂಜೆ ಸನ್ನಿಧಿಗೆ ಚೆಲುವನಾರಾಯಣಸ್ವಾಮಿ ಉತ್ಸವ ನಡೆಯಲಿದೆ.**

Scanned by CamScanner